Register Number:
Date: 6/1/21 AM

ST. JOSEPH'S COLLEGE (AUTONOMOUS), BANGALORE-27
B.Sc. Kannada – 1st SEMESTER
SEMESTER EXAMINATION: JANUARY - 2021
**KAS 118 – KANNADA**

Time- 2 1/2 hrs | Max Marks-70

ಕೊಡಲಾದ ಸೂಚನೆಗಳನ್ನು ಅನುಸರಿಸಿ ಉತ್ತರಿಸಿ.

I. (ಅ) ಒಂದು ಪದ್ಯ ಭಾಗಕ್ಕೆ ಭಾವಾರ್ಥ ಬರೆಯಿರಿ: 1x5=5

1) ಸಿರಿ ಹೋದ ಮರುಕವನು ನೆಲೆಗೆಟ್ಟ ಚಿಂತೆಯನು
ಪರದೇಶಮಂ ಹೊಕ್ಕ ನಾಚಿಕೆಯನರಿಯದ
ನ್ಯರ ಮನೆಯ ತೊತ್ತಾದ ಭಂಗವನು ನಿಮ್ಮಯ್ಯಗಜ್ಞಾತವಾದಳಲನು
ನೆರೆದು ಮನೆಯವರೆಯ್ದೆ ಕರಕರಿಪ ದುಃಖವನು
ತರಳ ನಿನ್ನಂ ನೋಡಿ ಮರೆದು ಪರಿಣಾಮವಂ
ಧರಿಸುತ್ತಿಪ್ಪೆನ್ನ ಗೋಣಂ ಕೊಯ್ದು ಇನ್ನಾರ ನೋಡಿ ಮರೆದಪೆನೆಂದಳು

2) ಜಲವೆ ಸಕಲ ಕುಲಕ್ಕೆ ತಾಯಿಯಲ್ಲವೆ ಆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ಈ ದೇಹ
ನೆಲೆಯನರಿತು ನೀ ಹರಿಯ ನೆನೆ ಮನುಜ

(ಆ) ಮೂರು ವಾಕ್ಯಗಳಿಗೆ ಸಂದರ್ಭವನ್ನು ವಿವರಿಸಿ: 3x5=15

3) ದೇವಾ ನಿಮಗಿಂದು ಪುತ್ರಲಾಭಮಾದುದು
4) ದುರ್ಮರಣವಟ್ಟ ಶೂದ್ರನನು ಸಂಸ್ಕರಿಸುವವರಾವಲ್ಲ
5) ಹುಟ್ಟದ ಯೋನಿಗಳಿಲ್ಲ; ಮೆಟ್ಟದ ಭೂಮಿಗಳಿಲ್ಲ
6) ಹಡೆದ ಬಾಣಂತಿಗೆ ಅನ್ನವಿಲ್ಲದಲೆ ಏರತಾವೆ ಮುಂಗೈಗೆ ಬಳೀ
7) ಕರೆಗೆ ಬಂದ ಕಾರಿಹೆಗ್ಗಡೆ ಕರಗಿ ಮುಳಿಸು, ಅತ್ತನು!
8) ಮರದ ಕೊಂಬೇರಿ ಬಿದ್ದನೋ; ಫಣಿ ತಿಂದುದೋ

II. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರಿಸಿ: 2x10=20

9) ವೃಷಭಸೇನಕುಮಾರನ ಜೀವನ ವೃತ್ತಾಂತವನ್ನು ಕುರಿತು ಬರೆಯಿರಿ.

10) "ಚಂದ್ರಮತಿಯ ಪ್ರಲಾಪ"ದಲ್ಲಿ ರಾಘವಾಂಕನು ಮಾತೃತ್ವ ಸಂವೇದನೆ ಮತ್ತು ದುಃಖವನ್ನು ಕೇಳುಗರೂ ದುಃಖಿಸುವಂತೆ ನಿರೂಪಿಸಿದ್ದು ಹೇಗೆ? ವಿವರಿಸಿ.

11) ಅನಾವೃಷ್ಟಿಯ ಹೊಡೆತಕ್ಕೆ ಸಿಲುಕಿ ನಲುಗಿದ ಸ್ವಾನುಭವದ ಗೀತೆ 'ಮಳೆರಾಜನ ಹಾಡಿ'ನಲ್ಲಿ ಹೇಗೆಲ್ಲ ದುರಂತಗಳು ಸಂಭವಿಸಿವೆ? ಚಿತ್ರಿಸಿ.

12) ಬಿ.ಎಂ.ಶ್ರೀ. ಯವರ ದುರಂತ ಕಥನಗೀತವಾದ "ಕಾರಿಹೆಗ್ಗಡೆಯ ಮಗಳು" ಪದ್ಯದ ಸಾರಾಂಶವನ್ನು ಬರೆಯಿರಿ.

**III. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:** **4x5=20**

13) ದನ ಕಾಯುವ ರಾಮು ತಂದುಕೊಟ್ಟಿದ್ದ ಆಕಾಶ ಬಗರೆ ಹಕ್ಕಿಗಳನ್ನು ಹೇಗೆ ಸಾಕಿದರು? ಅಮೇಲೆ ಏನಾಯಿತು?

14) ದಿಕ್ಕಿಲ್ಲದ ಮುದುಕಿ ಚಿನ್ನಮ್ಮನಿಗೆ ಬಾಗಿಲು ಮಾತ್ರವಲ್ಲದೆ ಬೇರೆ ರೀತಿಯಲ್ಲೂ ಸಹಾಯ ಮಾಡಲಾಯಿತೆ? ಹೇಗೆ?

15) ಲಕ್ಷ್ಮಿಯು ನಳಿನಿಗೆ ಬರೆದ ಪತ್ರದ ಸಾರಾಂಶವನ್ನು ಬರೆಯಿರಿ.

16) ತಲೆಮಾರು ಅಂತರದೊಂದಿಗೆ ಹೊಂದಿಕೊಳ್ಳಲು ಪಾಲಕರಿಗೆ ಹೇಳಲಾದ ಕಿವಿಮಾತುಗಳೇನು?

17) ತಮ್ಮ ಹಿರಿಯರ ಸಲುವಾಗಿ ಕಾಡುಗೊಲ್ಲರು ನಡೆಸುವ ಆಚರಣೆ ಯಾವುದು? ವಿವರಿಸಿ.

18) ಶಿವರಾತ್ರಿ ತಿಂಗಳಲ್ಲಿ ಕಾಡುಗೊಲ್ಲರು ಆಚರಿಸುವ ಗುಗ್ಗರಿಹಬ್ಬದ ವಿಶೇಷತೆಯನ್ನು ವಿವರಿಸಿ.

19) ಸುಸ್ಮಿತ ತನ್ನ ತಂದೆಗೆ ಕೋಪದಿಂದ ತನ್ನ ಪುಟ್ಟ ಕೈಗಳಿಂದ ಹೊಡೆದುದಕ್ಕೆ ಕಾರಣವಾದ ಘಟನೆಯನ್ನು ವಿವರಿಸಿ.

**IV. ಒಂದು ವಾಕ್ಯದಲ್ಲಿ ಉತ್ತರಿಸಿ:** **1x10=10**

20) 'ಸುಸ್ಮಿತ ಮತ್ತು ಹಕ್ಕಿಮರಿ' ಪ್ರಬಂಧವು ತೇಜಸ್ವಿಯವರ ಯಾವ ಕೃತಿಯಿಂದ ಆರಿಸಿಕೊಂಡಿದ್ದು?

21) ಜಲಚರಗಳ ವಂಶಾಭಿವೃದ್ಧಿಯ ಬಗ್ಗೆ ಬರೆಯಿರಿ.

22) ಮುನಿರಾಜು ಕಥಾ ನಿರೂಪಕರಿಗೆ ಚಿನ್ನಮ್ಮ ಕೈಮುಗಿಯುತ್ತಿರುವುದು ಯಾಕೆ ಎಂದು ವಿವರಿಸುತ್ತಾನೆ. ಅದೇನು?

23) ನಿರೂಪಕರಿಗೆ ಚಿನ್ನಮ್ಮ ಹೇಳುತ್ತಿರುವುದು ಅರ್ಥವಾಗದಿದ್ದಾಗ, ಮತ್ತೆ ದಾಸ್ ಬಳಿ ಚಿನ್ನಮ್ಮ ತನ್ನ ಮನೆ ಬಾಗಿಲಿನ ಬಗ್ಗೆ ಹೇಳಿದ್ದೇನು?

24) ಉನ್ನೀಸಾಗೆ ಪಾರ್ವತಿ ಎಲ್ಲಿ ಮತ್ತು ಯಾವ ಸ್ಥಿತಿಯಲ್ಲಿ ಸಿಕ್ಕಳು?

25) ಪಾರ್ವತಿ ಅನಾಥಳಾಗಲು ಕಾರಣವೇನು?

26) ಹಿರಿಯರೊಂದಿಗೆ ಹೇಗಿರಬೇಕೆಂದು ಕಿರಿಯರಿಗೆ ಸಲಹೆ ನೀಡಲಾಗಿದೆ?

27) ಮಕ್ಕಳನ್ನು ಬೇಡಲು ಮಕ್ಕಳಾಗದ ಮುತ್ತೈದೆಯರು ಪಾಲ್ಗೊಳ್ಳುವ ಆಚರಣೆ ಯಾವುದು?

28) ಕಾಳಹಬ್ಬದ ಅಂಗವಾಗಿ ಪಶುಪಾಲಕರು ಆಚರಿಸಿಕೊಂಡು ಬಂದ ಆಚರಣೆ ಯಾವುದು?

29) ವೈಷ್ಣವ ಪರಂಪರೆಯಿಂದ ಬಂದಿರಬಹುದಾದ ಮಣೇವುಗಳ ವಿಧಗಳು ಎಷ್ಟು? ಮತ್ತು ಅವು ಯಾವುವು?

-----------------------------------X-----------------------------------